ಇದ್ದಾರೆ. ಆದ್ದರಿಂದ ಅವರಿಗೆ ಪರಿಹಾರವನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಸರ್ಕಾರ ಉತ್ತರ ಹೇಳಬೇಕು.

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೂಲಿ ಕೆಲಸ ಮಾಡಿಕೊಂಡು ವಾಪಸ್ ಬರುವಾಗ ಒಂದು ಕಾಡು ಹಂದಿ ತಿವಿದಿದೆ, ಇದಕ್ಕೆ ಚಿಕಿತ್ಸೆ ಮಾಡಿಸಿಕೊಂಡಿರುವುದಕ್ಕೆ ಸುಮಾರು 40 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಹೇಳುತ್ತಿದ್ದಾರೆ. ಇವತ್ತು ಕಾಡು ಪ್ರಾಣಿಗಳಾದ ಹುಲಿ, ಆನೆ ಹಿಂಸೆ ಮಾಡಿದರೆ ಕಾನೂನಿನಲ್ಲಿ ಪರಿಹಾರ ಕೊಡುವುದಕ್ಕೆ ಅವಕಾಶ ಇದೆ. ಆದರೆ, ಹಂದಿಯಿಂದ ತೊಂದರೆಯಾದರೆ ಪರಿಹಾರ ಕೊಡಲು ಕಾನೂನಿನಲ್ಲಿ ಅವಕಾಶ ಮಾಡಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇವತ್ತು ಎಲ್ಲಾ ಕಬ್ಬಿನ ಗದ್ದೆಯಲ್ಲಿ ಹಂದಿಗಳು ಇವೆ, ನಾವು ಏನು ಮಾಡಬೇಕು? ಕಾನೂನಿನಲ್ಲಿ ಪರಿಹಾರ ಕೊಡುವುದಕ್ಕೆ ಪ್ರಾವಿಷನ್ ಮಾಡಬೇಕು.

ಶ್ರೀ ಡಿ.ಮಂಜುನಾಥ್: ಈಗಿರುವ ಕಾನೂನಿನ ಪ್ರಕಾರ ಪರಿಹಾರ ಕೊಡುವುದಕ್ಕೆ ಪ್ರಾವಿಷನ್ ಇಲ್ಲದೇ ಇರುವುದರಿಂದ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಕಾನೂನಿನಲ್ಲಿ ತಿದ್ದುಪಡಿ ಮಾಡೋಣ. ಈಗ ನಾವು ಮಾನವೀಯತೆಯ ದೃಷ್ಟಿಯಿಂದ, ಇವರು ಆಸ್ಪತ್ರೆಗೆ 40 ಸಾವಿರ ಖರ್ಚಾಗಿರುವ ಬಗ್ಗೆ ತನಿಖೆ ಮಾಡಿ ಆಸ್ಪತ್ರೆಯ ಚಿಕಿತ್ಸೆಗೆ ಆಗಿರತಕ್ಕಂಥ ಖರ್ಚನ್ನು ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

(ಓ) ಉಳ್ಳಾಲ ಕ್ಷೇತ್ರದಲ್ಲಿ ಬಸ ಬಾರದ ಪ್ರದೇಶಗಳಿಗೆ ಪರ್ಮಿಟ್ ನೀಡಿರುವುದು.

+ ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಉಪಾಧ್ಯಕ್ಷರೆ, ಸರ್ಕಾರಿ ಇಲಾಖೆಯಲ್ಲಿನ ಸಾರಿಗೆ ಇಲಾಖೆಯಲ್ಲಿ ಅತಿಬುದ್ಧಿವಂತರು ಮತ್ತು ಸರ್ಕಾರಿ ಅಧಿಕಾರಿಗಳು ಕಾನೂನನ್ನು ತಿರುಚಿ ಸಮಯ ಸಾಧಕತನದಿಂದ ಹಣವನ್ನು ಮಾಡುವಂತಹ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ನನ್ನ ಕ್ಷೇತ್ರ ಬಾರ್ಡರ್‌ನಲ್ಲಿದೆ. ಅಲ್ಲಿ ಕಿನ್ಯಾ ಗ್ರಾಮ ಎಂದು ಮಂಜೇಶ್ವರಕ್ಕೆ ಹೊಂದಿಕೊಂಡಂತಿದೆ. ಕರ್ನಾಟಕ ರಾಜ್ಯದ ಎಸ್‌ಟಿಎ ಅವರು ಇಂಟರ್‌ಸ್ಟೇಟ್ ಖಾಸಗಿ ಬಸ್ಸುಗಳಿಗೆ ಪರವಾನಿಗೆಯನ್ನು ಕೊಡುವಾಗ ಕರ್ನಾಟಕ-ಕೇರಳ ಭಾಗಕ್ಕೆ ಪರವಾನಿಗೆಯನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಪರ್ಮಿಷನ್ ಕೊಡುವಂತಹ ಸಂದರ್ಭದಲ್ಲಿ ಕರ್ನಾಟಕದಿಂದ 11 ಕಿ.ಮೀ. ದೂರ ಕೇರಳಕ್ಕೆ ಹೋದ ಮೇಲೆ ಪರ್ಮಿಷನ್ ಕೊಡುವಂತದ್ದು ನಿಯಮ ಬದ್ಧವಾಗಿರುವಂಥದ್ದು. ಆದರೆ ಎಸ್‌ಟಿಎ ಅವರು ನನ್ನ ಕ್ಷೇತ್ರದಲ್ಲಿರುವ ಕಿನ್ಯಾ ಗ್ರಾಮದ ನೆತ್ತಿಲಾ ಎಂಬಲ್ಲಿಗೆ ಸುಮಾರು 500 ಬಸ್ಸ್‌ಗಳ ಪರ್ಮಿಟ್‌ನ್ನು ಕೊಟ್ಟಿದ್ದಾರೆ. ಒಂದು ಬಸ್ಸು ಕೂಡ ಅಲ್ಲಿಗೆ ಬರುವುದಿಲ್ಲ. ಆ ನೆತ್ತಿಲಾ ಎಂಬ ಪ್ರದೇಶಕ್ಕೆ ರಸ್ತೆ ಕೂಡ ಇಲ್ಲ. ನನಗೆ ಕರ್ನಾಟಕ ರಾಜ್ಯ ಸರ್ಕಾರ ಉತ್ತರ

ಕೊಟ್ಟಿದೆ. 140 ಬಸ್ಸುಗಳಿಗೆ ಪರವಾನಿಗೆಯನ್ನು ಕೊಟ್ಟಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಇವತ್ತು ಸರ್ಕಾರವನ್ನು ಕೇಳುತ್ತಿದ್ದೇನೆ, ಅಲ್ಲಿಗೆ ಬಾರದೆ ಇರುವಂತಹ ಬಸ್ಸುಗಳಿಗೆ ಯಾವ ತರಹದಲ್ಲಿ ನೀವು ಪರ್ಮಿಟ್‌ನ್ನು ಕೊಡುತ್ತೀರಿ? ಮತ್ತು ಈ ಬಸ್ಸುಗಳು ಎಲ್ಲಿಗೆ ರನ್ ಆಗುತ್ತಾ ಉಂಟು. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಪಘಾತಗಳು ಆಗುವುದು ಹೀಗೆಯೇ. ಈ ಬಸ್ಸುಗಳನ್ನು ಶಿವಮೊಗ್ಗ, ಉಡುಪಿ, ಹಾಸನದಿಂದ ಪರ್ಮಿಟ್‌ನ ಇಷ್ಯೂ ಆಗುತ್ತಾ ಉಂಟು. ಬೇರೆಬೇರೆ ಕಡೆಗಳಿಗೆ ಬಸ್ಸುಗಳು ಹೋಗುವುದು ಉಂಟು. ನನ್ನ ಕ್ಷೇತ್ರಕ್ಕೆ ಬಸ್ಸುಗಳು ಬರುವುದಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ದಯವಿಟ್ಟು ಇದನ್ನೆಲ್ಲಾ ಕ್ಯಾನ್ಸಲ್ ಮಾಡಬೇಕು. ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು. ಈಗಾಗಲೇ ಅವರು ಕೋಟಿಗಟ್ಟಲೆ ಹಣವನ್ನು ಮಾಡಿದ್ದಾರೆ. 140 ಬಸ್ಸುಗಳಲ್ಲಿ ಒಂದು ಬಸ್ಸು ಸಹ ತಮ್ಮ ಊರಿಗೆ ಬರುವುದಿಲ್ಲ. ನಮ್ಮಲ್ಲಿ ರಸ್ತೆಯೂ ಸಹ ಸರಿಯಾಗಿಲ್ಲ. ನನಗೆ ಸರ್ಕಾರದಿಂದ ಉತ್ತರ ಬೇಕು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂತಹ ವಿಚಾರವನ್ನು ಸಾರಿಗೆ ಮಂತ್ರಿಯವರಿಗೆ ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

(ಬಿ) ಭಟ್ಕಳ್ ಬಂದರಿನಲ್ಲಿ ಹೂಳೆತ್ತುವ ಕೆಲಸ ನಿಂತುಹೋಗಿರುವ ಬಗ್ಗೆ.

ಶ್ರೀ ಶಿವಾನಂದನಾಯಕ್ (ಭಟ್ಕಳ್): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮೀನುಗಾರಿಕೆ ಮಂತ್ರಿಯವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಮೀನುಗಾರಿಕೆ ಸಚಿವರಿಗೆ ನೋಟೀಸ್ ತಲುಪಿದೆ. ಅವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಶಿವಾನಂದ ನಾಯಕ್: ಈ ಅಧಿವೇಶನ ಪ್ರಾರಂಭವಾದಾಗಿನಿಂದ ಸದನದಲ್ಲಿ ಹಿಂದಿನ ಬೆಂಚಿನಲ್ಲಿ ಮಧ್ಯೆ ಮಧ್ಯೆ ಯಾವುದೇ ವಿಷಯಕ್ಕೂ ಅಡೆತಡೆಯನ್ನು ಮಾಡದೇ ಸುಮ್ಮನೆ ಭಾಷಣವನ್ನು ಕೇಳುತ್ತಿದ್ದೇವೆ. ಇವತ್ತು ನಮಗೆ ಕ್ಷೇತ್ರದ ಸಮಸ್ಯೆ ಇದ್ದು ನಮಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಮಾನ್ಯ ಮೀನುಗಾರಿಕೆ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೆ, ಈ ವರ್ಷ ಮೀನುಗಳಿಗೆ ಬರ ಬಂದು ಮೀನುಗಾರರು ಬೀದಿ ಪಾಲಾಗುವಂತಹ ಪರಿಸ್ಥಿತಿ ಬಂದಿದೆ. ಇತ್ತೀಚಿನ ದಿನಗಳಲ್ಲಿ ಸ್ವಲ್ಪಸ್ವಲ್ಪ ಮೀನುಗಳು ಬರುತ್ತಿತ್ತು. ಆದರೆ ಅಲ್ಲಿ ಮತ್ತೊಂದು ಸಮಸ್ಯೆ ಬಂದಿದೆ. ಭಟ್ಕಳ್, ಮುರ್ಡೇಶ್ವರ ಹಾಗೂ ಹೊನ್ನಾವರ ಬಂದರುಗಳಲ್ಲಿ ಸಮಸ್ಯೆ ಬಂದಿದೆ. ಇವತ್ತು ಭಟ್ಕಳ್ ಬಂದರ್‌ನಲ್ಲಿ ಮೀನು ಹಿಡಿದರೂ ಸಹ ಅದು ದಡಕ್ಕೆ ಬರುವುದಕ್ಕೆ ಆಗುತ್ತಿಲ್ಲ.